

# ವೈದೇಹಿ

ಉಡುಪಿ ಜಿಲ್ಲೆಯ ಕುಂದಾಪುರ ಇವರ ಹುಟ್ಟೂರು. ಓದಿದ್ದು ಕುಂದಾಪುರದ ಬಿ.ಆರ್. ರಾಯರ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ. ತಾಯಿ ಇಟ್ಟ ಹೆಸರು ವಸಂತಿ. ತಂದೆ ಕರೆದ ಹೆಸರು ಜಾನಕಿ. ಶಾಲೆಗೆ ಸೇರಿಸುವಾಗ ಜಾನಕಿ ಎಂಬ ಹೆಸರು ದಾಖಲಾಯಿತು. ಮೊದಲ ಕತೆ 'ನೀರೆಯರ ದಿನ' 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವಾಗ ಅಂದಿನ ಸಂಪಾದಕ ಎಂ.ಬಿ. ಸಿಂಗ್ ಅವರಿಟ್ಟ ಹೆಸರು 'ವೈದೇಹಿ'. ಮುಂದೆ ಇದುವೇ ಅವರ ಬರಹಗಳ ಜೊತೆಗೆ ಪ್ರಕಟವಾಗುವ ಕಾಯಂ ಹೆಸರಾಯಿತು. ವೈದೇಹಿ ಕತೆಗಳನ್ನು ಮಾತ್ರವಲ್ಲದೇ ಕಾದಂಬರಿ, ಕಾವ್ಯ, ಮಕ್ಕಳ ನಾಟಕ, ಮಕ್ಕಳ ಕತೆ, ಪ್ರಬಂಧ, ಜೀವನ ಚರಿತ್ರೆ, ಅಂಕಣ ಬರಹ – ಇತ್ಯಾದಿಗಳನ್ನು ಬರೆದಿದ್ದಾರೆ. ಪ್ರಸ್ತುತ ಇವರು ಮಣಿಪಾಲದಲ್ಲಿ ನೆಲಸಿದ್ದಾರೆ.

ಕುಂದಾಪುರ ಹಾಗೂ ಬಂಟ್ವಾಳ ತಾಲ್ಲೂಕು ಆಸುಪಾಸಿನ ಆಡುಭಾಷೆಯ ವಿಶೇಷ ಸೊಬಗು ಅವರ ಬರಹಗಳನ್ನು ವಿಶಿಷ್ಟವಾಗಿಸಿದೆ. ಅವರ ಮೊದಲ ಕಥಾಸಂಕಲನ –ಮರ ಗಿಡ ಬಳ್ಳಿ. ಪ್ರಕಟಿಸಿದ ಅಕ್ಷರ ಪ್ರಕಾಶನವೇ ಮುಂದೆ ಇವರ ಇತರ ಕಥಾಸಂಗ್ರಹಗಳಾದ 'ಅಂತರಂಗದ ಪುಟಗಳು', 'ಗೋಲ', 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ', 'ಅಮ್ಮಚ್ಚಿ ಎಂಬ ನೆನಪು', 'ಕ್ರೌಂಚಪಕ್ಷಿಗಳು' ಮತ್ತು 'ಕತೆ ಕತೆ ಕಾರಣ' ಸಂಗ್ರಹಗಳನ್ನೂ, ಇತ್ತೀಚೆಗೆ ಇವರ ಇದುವರೆಗಿನ ಕತೆಗಳ ಸಮಗ್ರ ಸಂಗ್ರಹವನ್ನೂ ('ವೈದೇಹಿ ಕತೆಗಳು') ಪ್ರಕಟಿಸಿದೆ.

'ಅಸ್ಪೃಶ್ಯರು' ಕಾದಂಬರಿ, 'ಬಿಂದು ಬಿಂದಿಗೆ', 'ಪಾರಿಜಾತ', 'ಹೂವ ಕಟ್ಟುವ ಕಾಯಕ' ಕವನ ಸಂಗ್ರಹಗಳನ್ನು ರಚಿಸಿದ್ದಲ್ಲದೆ, ಯಶಸ್ವಿ ಅನುವಾದಕಿಯೂ ಆಗಿರುವ ವೈದೇಹಿ, 'ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ' (ಮೂಲ: ಕಮಲಾದೇವಿ ಚಟ್ಟೋಪಾಧ್ಯಾಯ), 'ಬೆಳ್ಳಿಯ ಸಂಕೋಲೆಗಳು' (ಮೂಲ: ಮೈತ್ರೇಯಿ ಮುಖೋಪಾಧ್ಯಾಯ), 'ಅಕ್ಕ ತಂಗಿಯರು' (ಮೂಲ: ಆಂಟನಿ ಚೆಕಾಫ್), 'ಸೂರ್ಯಕಿನ್ನರಿಯರು' (ಮೂಲ: ಸ್ವಪ್ನಾ ದತ್ತ) ಮುಂತಾದ ಕೃತಿಗಳನ್ನು ಹೊರತಂದಿದ್ದಾರೆ. ಇವರು ಮಾಡಿದ ಭಾಸ್ಕರ್ ಚಂದಾವರ್ಕರ್ ಅವರ ಸಂಗೀತ ಉಪನ್ಯಾಸಗಳ ಅನುವಾದ 'ಸಂಗೀತ ಸಂವಾದ' ಭಾರತದಲ್ಲೇ ಈ ಪ್ರಕಾರದ ಏಕೈಕ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಯಾವುದನ್ನೂ ಧಡಬಡ ಮಾಡಲು ಅರಿಯರು. ಬಿಳಿಪಂಚೆ, ಕರಿಕೋಟು, ಬಿಳೀಮುಂಡಾಸಿನಲ್ಲಿ ಕೋರ್ಟಿಗೆ ಹೊರಟುನಿಂತ ತಂದೆ ಎಷ್ಟು ಗಂಭೀರವಿದ್ದಾರೆ! ಅಮ್ಮ ಹೇಳುವಂತೆ ಒಳ್ಳೆ, ಲಕ್ಷಣವಾಗಿ! ಆದರೆ ಎಲ್ಲ ಹೊತ್ತಿನಲ್ಲೂ ಏನು ಅವರು ಯೋಚಿಸುತ್ತಿರುವುದು? ಮನಸಿಗೆ ಅದು ತಾಕುತಿತ್ತು ಹೊರತು ತಿಳಿಯುತ್ತಿರಲಿಲ್ಲ. ಅವರು ಹೊರಗೆ ಹೊರಟರೆಂದರೆ ನಮ್ಮಲ್ಲಿ ಯಾರಾದರೊಬ್ಬರು ಸ್ಪರ್ಧೆಯಲ್ಲಿ ಎಂಬಂತೆ ಚಪ್ಪಲಿ ಒರೆಸಿ ಸಿದ್ಧಮಾಡಿ ಅವರು ಬಾಗಿಲಿಗೆ ಬರುವುದರೊಳಗೆ ಅಲ್ಲಿ ಜೋಡಿಸಿಟ್ಟಿರುತ್ತಿದ್ದೆವು. ಸದಾ